**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMI0EST(3)/15/2020

ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001
ದಿನಾಂಕ: 28.02.2023

**ಅಧಿಸೂಚನೆ**

**ವಿಷಯ:** 2023-24ನೇ ಸಾಲಿನಲ್ಲಿ ಹೊಸದಾಗಿ ಆರಂಭಗೊಳ್ಳಲಿರುವ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಹೊರಗುತ್ತಿಗೆ ಮೇರೆಗೆ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ನಿಯೋಜಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಇಡಿ 124 ಟಿಪಿಇ 2017, ದಿನಾಂಕ: 14.02.2018.
2. ಈ ಕಛೇರಿ ಕಾರ್ಯಾದೇಶ ಸಂಖ್ಯೆ: ಡಿಟಿಇ 42 ಇಎಸ್‌ಟಿ(3) 2017, ದಿನಾಂಕ: 21.07.2018.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 23 ಹೆಚ್.ಪಿ.ಟಿ. 2019. (ಭಾ) ದಿನಾಂಕ: 23.03.2020.
4. ಈ ಕಛೇರಿ ಅಧಿಸೂಚನೆ ಸಂಖ್ಯೆ: DTE-ADMI0EST(3)/42/2020, ದಿನಾಂಕ: 21.01.2021
5. ಈ ಕಛೇರಿ ಅಧಿಸೂಚನೆ ಸಂಖ್ಯೆ: DTE-ADMI0EST(3)/15/2020, ದಿನಾಂಕ: 04.10.2021, ದಿ: 18.10.2021, ದಿ: 14.01.2022, ದಿ: 14.02.2022, ದಿ: 04.04.2022, ದಿ: 06.06.2022 ಮತ್ತು ದಿ: 11.10.2022.

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಕಛೇರಿ / ಸಂಸ್ಥೆಗಳಲ್ಲಿ ಖಾಲಿಯಿರುವ ಕಛೇರಿ ಸಹಾಯಕರ ಹಾಗೂ ಕಾರ್ಯಗಾರ ಸಹಾಯಕರ ವೃಂದದ ಗ್ರೂಪ್-ಡಿ ದರ್ಜೆಗೆ ಸೇರಿದ ಅಕುಶಲ ಹುದ್ದೆಗಳಿಗೆ ಹೊರ ಮಾನವ ಸಂಪನ್ಮೂಲ ಸಂಸ್ಥೆಗಳ ಮೂಲಕ ಭರ್ತಿ ಮಾಡಲು ಉಲ್ಲೇಖ(1) ರಲ್ಲಿ ಸರ್ಕಾರ ಅನುಮೋದನೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಟೆಂಡರ್ ಮೂಲಕ ಅರ್ಹತೆ ಪಡೆದು ಮೆ|| ಮಾತಾ ಟೆಕ್ನಾಲಜೀಸ್, ಧಾರವಾಡ ಮತ್ತು ಮೆ|| ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು ಸಂಸ್ಥೆಯು ಅಂಗೀಕಾರಗೊಂಡಿದ್ದರಿಂದ, ಸದರಿ ಸಂಸ್ಥೆಗಳಿಗೆ ಉಲ್ಲೇಖ(2) ರನ್ವಯ ಕಾರ್ಯದೇಶ ನೀಡಲಾಗಿರುತ್ತದೆ ಹಾಗೂ ಪ್ರಸ್ತುತ ಉಲ್ಲೇಖ(4) ಮತ್ತು (5) ರಲ್ಲಿ ತಿಳಿಸಿರುವಂತೆ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಆದೇಶಿಸಲಾಗಿರುತ್ತದೆ.

2023-24ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಆರಂಭಗೊಳ್ಳಲಿರುವ ಕೆಳಕಂಡ ಕೋಷ್ಟಕದ ಕಾಲಂ(2) ರಲ್ಲಿನ ಸಂಸ್ಥೆಗಳಿಗೆ ಆಡಳಿತಾತ್ಮಕ ಹಿತದೃಷ್ಠಿಯಿಂದ ಕೋಷ್ಟಕದ ಕಾಲಂ(3) ರಲ್ಲಿನ ಸಂಸ್ಥೆಯಿಂದ ಹೊರಗುತ್ತಿಗೆ ಮೇರೆಗೆ ಒದಗಿಸಲಾಗಿರುವ ಗ್ರೂಪ್–ಡಿ ಸಿಬ್ಬಂದಿಗಳ ಪೈಕಿ ತಲಾ ಇಬ್ಬರು ಹೊರಗುತ್ತಿಗೆ ಗ್ರೂಪ್–ಡಿ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸಲು ಆದೇಶಿಸಿದೆ.

...2/-

| ಕ್ರ. ಸಂ. | ಹೊಸದಾಗಿ ಪ್ರಾರಂಭಗೊಳ್ಳಲಿರುವ ಸಂಸ್ಥೆಯ ಹೆಸರು | ಹೊರಗುತ್ತಿಗೆ ಮೇರೆಗೆ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಸಂಸ್ಥೆಗೆ ಅನುಮತಿ ನೀಡಲಾದ ಸಂಖ್ಯೆಯ ಪೈಕಿ ಇಬ್ಬರು ಸಿಬ್ಬಂದಿಗಳನ್ನು ನಿಯೋಜನೆ ಮೇರೆಗೆ ಪಡೆಯಬೇಕಾದ ಸಂಸ್ಥೆಗಳ ಹೆಸರು |
|---|---|---|
| (1) | (2) | (3) |
| 1. | ಸರ್ಕಾರಿ ಪಾಲಿಟೆಕ್ನಿಕ್, ಅರಕೇರ, ರಾಯಚೂರು ಜಿಲ್ಲೆ | ಸರ್ಕಾರಿ ಪಾಲಿಟೆಕ್ನಿಕ್, ದೇವದುರ್ಗ |
| 2. | ಸರ್ಕಾರಿ ಪಾಲಿಟೆಕ್ನಿಕ್, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ | ಸರ್ಕಾರಿ ಪಾಲಿಟೆಕ್ನಿಕ್, ಕುಶಾಲನಗರ |
| 3. | ಸರ್ಕಾರಿ ಪಾಲಿಟೆಕ್ನಿಕ್, ಬ್ಯಾಡಗಿ, ಹಾವೇರಿ ಜಿಲ್ಲೆ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ |
| 4. | ಸರ್ಕಾರಿ ಪಾಲಿಟೆಕ್ನಿಕ್, ಕಮಡೋಹಳ್ಳಿ, ಧಾರವಾಡ ಜಿಲ್ಲೆ | ಸರ್ಕಾರಿ ಪಾಲಿಟೆಕ್ನಿಕ್, ಹುಬ್ಬಳ್ಳಿ |
| 5. | ಸರ್ಕಾರಿ ಪಾಲಿಟೆಕ್ನಿಕ್, ಹೊಳೆ ಆಲೂರು, ಗದಗ ಜಿಲ್ಲೆ | ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ |
| 6. | ಸರ್ಕಾರಿ ಪಾಲಿಟೆಕ್ನಿಕ್, ಮಸ್ಕಿ, ರಾಯಚೂರು ಜಿಲ್ಲೆ | ಸರ್ಕಾರಿ ಪಾಲಿಟೆಕ್ನಿಕ್, ಲಿಂಗಸುಗೂರು |
| 7. | ಸರ್ಕಾರಿ ಪಾಲಿಟೆಕ್ನಿಕ್, ತಿಪಟೂರು, ತುಮಕೂರು ಜಿಲ್ಲೆ | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು |
| 8. | ಸರ್ಕಾರಿ ಪಾಲಿಟೆಕ್ನಿಕ್, ರಾಮದುರ್ಗ, ಬೆಳಗಾವಿ ಜಿಲ್ಲೆ | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಾಗಲಕೋಟೆ |
| 9. | ಸರ್ಕಾರಿ ಪಾಲಿಟೆಕ್ನಿಕ್, ಕೊಲ್ಹಾರ, ವಿಜಯಪುರ ಜಿಲ್ಲೆ | ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ |
| 10. | ಸರ್ಕಾರಿ ಪಾಲಿಟೆಕ್ನಿಕ್, ರೋಣ, ಗದಗ ಜಿಲ್ಲೆ | ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಗಡ |

**"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

28/02/2023

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

**ಇವರಿಗೆ (ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ):**

1. ಸಂಬಂಧಪಟ್ಟ ಪ್ರಾಂಶುಪಾಲರು / ವಿಶೇಷಾಧಿಕಾರಿಗಳಿಗೆ;
2. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಮೆ|| ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು;
4. ಮೆ|| ಮಾತಾ ಟೆಕ್ನಾಲಜೀಸ್, ಧಾರವಾಡ;
5. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:-**

1. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.